**ಎಂ ವಿ ಸಿ ನಂ. 729/24**
**ಪಿ ಡಬ್ಲ್ಯೂ: 1**

**ದಿ: 19-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ: ವಾದಿ ಪರ ಶ್ರೀ ಎಸ್ ವಾಯ ವಿ ವಕೀಲರಿಂದ:**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದ ಎಲ್ಲಾ ವಿಷಯಗಳು ಸರಿಯಾಗಿದ್ದು ಸತ್ಯವಾಗಿರುತ್ತವೆ.

ಪ್ರ.ವ. ವರದಿಯನ್ನು ನಿಪಿ-1, ದೂರಿನ ಪ್ರತಿಯನ್ನು ನಿಪಿ-2, ಗುನ್ಹೆ ಸ್ಥಳದ ಪಂಚನಾಮೆಯನ್ನು ನಿಪಿ-3, ವಾಹನ ಜಪ್ತಿ ಪಂಚನಾಮೆಯನ್ನು ನಿಪಿ-4, ದೋಷಾರೋಪಣೆ ಪಟ್ಟಿಯನ್ನು ನಿಪಿ-5, ಮೋಟರ ವಾಹನ ತಪಾಸಣಾ ವರದಿಯನ್ನು ನಿಪಿ-6, ಗಾಯದ ಪ್ರಮಾಣ ಪತ್ರವನ್ನು ನಿಪಿ-7, ಶ್ರೀ ರಾಮ ಪೈನಾನ್ಸನವರು ನೀಡಿದ ವೇತನ ಪ್ರಮಾಣ ಪತ್ರವನ್ನು ನಿಪಿ-8, ಔಷದಿ ಚೀಟಿಗಳು ಒಟ್ಟು 38 ಇವುಗಳನ್ನು ಒಟ್ಟಾಗಿ ನಿಪಿ-9, ಔಷದಿ ಬಿಲ್ಲುಗಳು ಒಟ್ಟು 66 ಇವುಗಳನ್ನು ಒಟ್ಟಾಗಿ ನಿಪಿ-10, ಬ್ಯಾಂಕ ಪಾಸ ಪುಸ್ತಕ, ಪ್ಯಾನ ಕಾರ್ಡ ಹಾಗೂ ಆಧಾರ ಕಾರ್ಡ ಮೂಲ ಪ್ರತಿಗಳನ್ನು ಹಾಜರ ಪಡಿಸಿದ್ದು ನಕಲು ಪ್ರತಿಯೊಂದಿಗೆ ಹೋಲಿಕೆ ಮಾಡಿ ಮೂಲ ದಾಖಲೆಗಳನ್ನು ಮರಳಿಸಿ ದೃಡಿಕೃತ ಪ್ರತಿಗಳನ್ನು ನಿಪಿ-11 ರಿಂದ 13, ಎಸ್ ಡಿ ಎಂ ಆಸ್ಪತ್ರೆಯವರು ನೀಡಿದ ಬಿಡುಗಡೆ ಪತ್ರವನ್ನು ನಿಪಿ-14 ಎಂದು ಗುರುತಿಸಲಾಯಿತು.

ಪಾಟೀ ಸವಾಲು: 3 ನೇ ಎದುರುದಾರರ ಪರ:

ನಾವು ಮೋಟರ ಸೈಕಲಿನಲ್ಲಿ ಎಡಬದಿಯಲ್ಲಿ ಹೋಗುವಾಗ ನಾನು ಹಿಂಬದಿ ಸವಾರಿ ಮಾಡುತ್ತಿದ್ದು ಎದುರಿನಿಂದ ಬಂದ ಲಾರಿ ಚಾಲಕ ವೇಗವಾಗಿ ಬಂದು ನಮ್ಮ ವಾಹನಕ್ಕೆ ಡಿಕ್ಕಿ ಪಡಿಸಿದ ಅಂದರೆ ನಿಜ. ಅಪಘಾತವು ಲಾರಿ ನಂ ಎಂ ಎಚ್ 11/ಎ ಬಿ 4272 ನೇದ್ದರ ಚಾಲಕನ ಅತೀ ವೇಗ ಹಾಗೂ ನಿರ್ಲಕ್ಷತನದಿಂದ ಆಗಿರುತ್ತದೆ ಅಂದರೆ ನಿಜ. ಅಪಘಾತವಾದ ಸಮಯದಲ್ಲಿ 3 ನೇ ಎದುರುದಾರ ಸೂಕ್ತವಾದ ವಾಹನ ಚಾಲನಾ ಪರವಾನಿಗೆ ಹೊಂದಿದ್ದು ಸದರಿ ವಾಹನ ವಿಮಾ ಸೌಲಭ್ಯಕ್ಕೆ ಒಳಪಟ್ಟಿರುತ್ತದೆ ಅಂದರೆ ನಿಜ. ಅಪಘಾತವು ಲಾರಿ ಚಾಲಕನ ತಪ್ಪಿನಿಂದ ಆಗಿರುವುದರಿಂದ ಅದರ ಮಾಲೀಕ ವಿಮೆದಾರ ಪರಿಹಾರ ನೀಡಲು ಬಾಧ್ಯಸ್ಥ ಅಂದರೆ ನಿಜ.

ಪಾಟೀ ಸವಾಲು: 1 ಮತ್ತು 2 ನೇ ಎದುರುದಾರ ಪರ:

(ಪಾಟೀ ಸವಾಲಿಗೆ ಮುಂದೂಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.